# ಧೂಪಾರತಿಯ ನೋಡುವ ಬನ್ನಿ

**(Version – 2)**

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 297.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 120.
3. **Note:** Lyrics given here are as per Ref. 1. The wordings in Ref. 2 are a mix of Version 1 and Version 2 and are not considered here.
4. **Note:** There is one more set of lyrics which are different and are listed as Version – 1. Ankita is same in both the versions.

ರಾಗ: ಪೂರ್ವಿ ಕಲ್ಯಾಣಿ ತಾಳ: ಅಟ

ಧೂಪಾರತಿಯ ನೋಡುವ ಬನ್ನಿ || ಪ ||
ನಮ್ಮ ಗೋಪಾಲಕೃಷ್ಣ ದೇವರ ಪೂಜೆಯ || ಅಪ ||

ಮುತ್ತು ಛತ್ರ ಚಾಮರ ಪತಾಕ ಧ್ವಜ
ರತ್ನ ಕೆತ್ತಿಸಿದ ಪದಕ ಹಾರಗಳು
ಮತ್ತೆ ಕೋಟಿ ಸೂರ್ಯ ಪ್ರಭೆಯ ಧಿಕ್ಕರಿಸುವ
ಸತ್ಯಭಾಮೆ ರುಕ್ಮಿಣಿಯರಸ ಶ್ರೀ ಕೃಷ್ಣನ || 1 ||

ಢಣ ಢಣ ಢಣವೆಂಬ ತಾಳ ದಂಡಿಗೆ ಭೇರಿ
ಝುಣಕು ಧಿಮಿಕು ಎಂಬ ಮದ್ದಳೆಯ
ಝುಣ ಝುಣಿಸುವ ರವ ವೀಣೆ ಕಿನ್ನರಿ ಸ್ವರ
ಘನ ರಾಗದಿಂದಲಿ ಹಾಡುತ ಪಾಡುತಲಿ || 2 ||

ಷಡಪಂಚ ಘಂಟೆ ಝಾಗಟೆಯು ಮೊದಲಾದ
ದೃಢವಾದ ವಾದ್ಯ ಮಂಗಳ ನಿನಾದಲ್ಲಿ
ಪಡೆದ ಕಾಂತಿ ಧವಳ ಶಂಖದ ಪೂಜೆಗಳಿಂದ
ಒಡೆಯ ಶ್ರೀಯರಸನ ಸಂಭ್ರಮದ ಪೂಜೆಯ || 3 ||

ಹರಿ ಸುರಪತಿ ವಿರಿಂಚಿ ಜನಕ
ಪರಮ ಮೂರುತಿ ಪುರುಷೋತ್ತಮನ
ಪರದೈವವೆಂಬ ಶ್ರೀ ರಂಗನಾಥನಾದ
ಪುರಂದರ ವಿಠಲ ದೇವರ ಪೂಜೆಯ || 4 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಧೂಪಾರತಿ** – ನಿರ್ಯಾಸ, ಪರಾಗ, ಕಾಷ್ಠ, ಗಂಧ ಮತ್ತು ಕೃತ್ರಿಮವೆಂಬ ಐದು ಜಾತಿಯ ಸುಗಂಧ ದ್ರವ್ಯಗಳನ್ನು ಸೇರಿಸಿ ಹೊಗೆ ಹೊರಡಿಸುವುದು ಧೂಪವೆನಿಸಿಕೊಳ್ಳುತ್ತದೆ. ಇದಕ್ಕಾಗಿ ಗುಗ್ಗುಲು, ಅಗುರು, ಉಶೀರ, ಶರ್ಕರ, ಮಧುಚಂದನ ಮೊದಲಾದ ಸಾಮಗ್ರಿಗಳನ್ನು ಬಳಸುತ್ತಾರೆ. ಹೀಗೆ ಧೂಪವನ್ನು ದೇವರೆದುರು ತೋರಿಸುವುದು, ಪ್ರದಕ್ಷಿಣಾಕಾರವಾಗಿ ಸುತ್ತುವುದು ಧೂಪಾರತಿ.

**ಏಕಾರತಿ** – ತಟ್ಟೆಯ ಮೇಲೆ ಒಂದು ಬತ್ತಿಯನ್ನಿಟ್ಟು ಅದನ್ನು ದೇವರ ಮುಂದೆ ಬೆಳಗುವುದು.

**ಅಗರು** = ಒಂದು ಸುಗಂಧ ದ್ರವ್ಯ

**ಸಾಮ್ರಾಣಿ** = ಲೋಭಾನ, ಧೂಪ

**ಹೊದ್ವಿದ್ದ** = ಒದಗಿ ಬಂದ

**ದಂಡಿಗೆ** = ಒಂದು ಬಗೆಯ ತಂತು ವಾದ್ಯ (ಚಿಕ್ಕ ತಂಬೂರಿ)

**ಕಿನ್ನರಿ** = ಒಂದು ಪ್ರಾಚೀನ ತಂತು ವಾದ್ಯ

**ಘನ ರಾಗ** = ಜನಕ ರಾಗಗಳು

**ಧ್ವಜ** = ಚಿಕ್ಕ ಬಾವುಟ

**ಪಾತಕ** = ದೊಡ್ಡ ಬಾವುಟ

**ವಿರಿಂಚಿ ಜನಕ** = ಬ್ರಹ್ಮನ ತಂದೆ, ವಿಷ್ಣು

**Classification:** Keerthane
**Ankita:** purandara vittala
**Location:** Srirangam, TN
**Category:** Arati song
**Sub-Category:** arati, Gopala, Krishna, deva, puje, shankha, bhakti, hari sarvottama, mangala, daiva, ranga, dhwaja, ratna, surya, satyabhame, Rukmini, arasa, kinnari, brahma, kinnara, veene, vaadya
**Pravachana:** NA
**Explanation:** NA